ಶ್ರೀ ಡಿ. ಟಿ. ರಾಮು.—ಈ ಬಿಲ್ಲಿಂಗ್ ಇರತಕ್ಕದ್ದು ನಮ್ಮ ಗಮನಕ್ಕೆ ಬಂದಿಲ್ಲವೆಂದೂ ಸರ್ಕಾರೀ ದಾಖಲೆಯಲ್ಲಿ ಇದರ ಹೆಸರೇ ಇಲ್ಲವೆಂದೂ ಹೇಳುತ್ತಿದ್ದೀರಿ. ಹಾಗಾದರೆ ಪ್ರತಿವರ್ಷವೂ ಲೋಕೋಪಯೋಗಿ ಇಲಾಖೆಯವರು ಈ ಕಟ್ಟಡವನ್ನು ಏತಕ್ಕೆ ರಿಪೇರಿ ಮಾಡುತ್ತಿದ್ದರು ?

ಶ್ರೀ ಎ.ಕೆ. ಅಬ್ದುಲ್ ಸಮದ್.—ಇದಕ್ಕೆ ನಾವು ಮಂಜೂರಾತಿಯನ್ನೂ ಕೊಟ್ಟಿಲ್ಲ, ಸರ್ಕಾರೀ ಆಜ್ಞೆ ಹೊರಡಿಸಿಲ್ಲ, ಅಲ್ಲದೆ ಇದರ ಬಗ್ಗೆ ಯಾವುದೇ ರೆಕಾರ್ಡ್ಸ್ ಕೂಡ ನಮ್ಮಲ್ಲಿಲ್ಲ. ನೀವು ಹೇಳಿರುವುದರಿಂದ ವೈದ್ಯರು ವಾರಕ್ಕೆ ಎರಡುಬಾರಿ ಆ ಆಸ್ಪತ್ರೆಗೆ ಭೇಟಿ ನೀಡುವಂತೆ ಆಜ್ಞೆ ಮಾಡಿದ್ದೇನೆ. ಮತ್ತು ಪ್ರಸಕ್ತ ಸಾಲಿನಲ್ಲೇ ಅಲ್ಲಿ ಒಂದು ಹೆಲ್ತ್ ಯೂನಿಟ್ ಕೂಡ ಸ್ಯಾಂಕ್ಷನ್ ಮಾಡುವುದಕ್ಕೆ ತೀವ್ರ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಟಿ. ರಾಮು.—ಅಲ್ಲಿ ಆಸ್ಪತ್ರೆ ಕಟ್ಟಡ ಇರುವುದರಿಂದ ಲೋಕೋಪಯೋಗಿ ಇಲಾಖೆಯವರು ಅದನ್ನು ರಿಪೇರಿ ಮಾಡುತ್ತಿರುವುದು.

ಅಧ್ಯಕ್ಷರು.—ಅದು ಸರ್ಕಾರೀ ದಾಖಲೆಯಲ್ಲಿ ಇಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಡಿ. ಟಿ. ರಾಮು.—ಹಿಂದೆಯೇ ಇದನ್ನು ಮಾಡಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೇಕಾದರೆ ಈ ರೆಕಾರ್ಡ್ಸನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಸರ್ಕಾರೀ ಆದೇಶ ಏನಿದೆ ಅದನ್ನು ಓದಿ ಹೇಳಿ.

ಶ್ರೀ ಡಿ. ಟಿ. ರಾಮು.—ವಾರಕ್ಕೆ ಎರಡುಸಾರಿ ವೈದ್ಯರು ಬಂದು ಜನರಿಗೆ ಚಿಕಿತ್ಸೆಮಾಡಿ ಹೋಗುವಂತೆ ಮಾಡಬೇಕೆಂದು ನಾವು ಮನವಿಯನ್ನು ಕೊಟ್ಟಮೇಲೆ ೧೯೮೧ ರಲ್ಲಿ ಡಾಕ್ಟರನ್ನು ನೇಮಕ ಮಾಡಿದರು. ಈ ಕಟ್ಟಡ ಬಹಳ ದೊಡ್ಡದಾಗಿರುವುದರಿಂದ ಅಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನೇ ಮಾಡಬಹುದು. ಮಾನ್ಯ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು, ಆಂದಿನ ಆರೋಗ್ಯ ಮಂತ್ರಿಗಳಾಗಿದ್ದ ಕೆ. ಪುಟ್ಟಸ್ವಾಮಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮುಖ್ಯ ಅತಿಥಿಯಾಗಿದ್ದರು. ಇಷ್ಟೆಲ್ಲಾ ಇರುವಾಗ ಅಲ್ಲಿ ಆಸ್ಪತ್ರೆಯ ಕಟ್ಟಡ ಇದೆಯೆಂಬುದೇ ತಮಗೆ ಗೊತ್ತಿಲ್ಲವೆಂದು ಹೇಳಿದರೆ ಅದಕ್ಕೆ ನಾವು ಏನು ಹೇಳಬೇಕು ?

ಅಧ್ಯಕ್ಷರು.—ಸರ್ಕಾರೀ ದಾಖಲೆಯಲ್ಲಿಲ್ಲವೆಂದು ಹೇಳುತ್ತಿದ್ದಾರೆಯೇ ಹೊರತು ನಮಗೆ ಗೊತ್ತಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಕೆಂಗಲ್‌ರವರನ್ನು ಹಾಗೆಯೇ ಕರೆದುಕೊಂಡುಹೋಗಿ ಉದ್ಘಾಟನೆ ಮಾಡಿಸಿದ್ದಾರೆ. ಆದರೆ ಸರ್ಕಾರೀ ದಾಖಲೆಯಲ್ಲಿಲ್ಲ. ಆದರೆ ಮಾನ್ಯ ಕೆಂಗಲ್ ಹನುಮಂತಯ್ಯನವರು ಅದನ್ನು ಉದ್ಘಾಟನೆ ಮಾಡಿದ್ದರೆಂದು ತಾವು ಹೇಳುತ್ತಿರುವುದರಿಂದ ಈ ವಿಚಾರವನ್ನು ನಾನು ತೀವ್ರವಾಗಿ ಪರಿಶೀಲಿಸುತ್ತೇನೆ.

ಶ್ರೀ ಡಿ. ಟಿ. ರಾಮು.—ಆದಷ್ಟುಬೇಗ ಅಲ್ಲಿಗೆ ವೈದ್ಯರನ್ನು ನೇಮಕ ಮಾಡುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಈಗ ವಾರಕ್ಕೆ ಎರಡು ಸಾರಿ ವೈದ್ಯರು ಭೇಟಿ ನೀಡುವಂತೆ ಆಜ್ಞೆ ಮಾಡಿದ್ದೇನೆ. ತಾವು ಹೇಳುತ್ತಿರುವುದನ್ನು ತೀವ್ರವಾಗಿ ಪರಿಶೀಲಿಸುತ್ತೇನೆ.

Transfers of Employes working in the District Health and Family Welfare Offiee at Mangalore.

950. SRI K. RAMA BHAT (Puttur) Will the Minister for Health and Family Welfare be pleased to state :—

(a) the number of employees who are working in the Office of District Health and Family Welfare at Mangalore, without transfers even after rendering five years of service in that office;

(b) the reason for retaining them in one and the same place without transfers;

(c) the measures to be undertaken by the Government in this regard ?

SRI A. K. ABDUL SAMAD (Minister for Health and Family Welfare)—.

(a) 23.

(b) (i) Grade I Employees are not eligible for transfers.

(ii) According to the instructions issued by the Government in connection with the General Elections of 1978;

(iii) According to the instructions issued from time to time by the Government on Economy Measures.

(c) Does not arise in view of replies furnished to clauses (a) and (b) above.

ಶ್ರೀ ಕೆ. ರಾಮಂಭಟ್.—ಸ್ವಾಮಿ, ''ಮಂಗಳೂರಿನಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವರ್ಗಾವಣೆ ಇಲ್ಲದೆ ೫ ವರ್ಷಗಳಿಗಿಂತಲೂ ಹೆಚ್ಚು ಸೇವೆ ಸಲ್ಲಿಸಿರುವ ನೌಕರರ ಸಂಖ್ಯೆ ಎಷ್ಟು ? ಎಂದು ನಾನು ಕೇಳಿರುವ ಪ್ರಶ್ನೆಗೆ ''೨೩'' ಎಂದು ತಾವು ಉತ್ತರ ಕೊಟ್ಟಿದ್ದೀರಿ ಎಲ್ಲ ದರ್ಜೆಯ ನೌಕರರೂ ಇದರಲ್ಲಿ ಸೇರಿದ್ದಾರೋ ಅಥವಾ ೧ನೇ ದರ್ಜೆಯ ನೌಕರರು ಮಾತ್ರ ಸೇರಿದ್ದಾರೋ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಡಿ. ಹೆಚ್. ಓ. ಎ. ಡಿ. ಹೆಚ್, ಓ . ಕ್ಲರ್ಕ್ಸ್, ಜವಾನರು, ಡ್ರೈವರ್‌ಗಳು ಎಲ್ಲಾ ಸೇರಿ ೬೫ ಜನ ಆಗುತ್ತಾರೆ. ಇದರಲ್ಲಿ ೫ ವರ್ಷಕ್ಕಿಂತ ಹೆಚ್ಚಿಗೆ ಅಲ್ಲಿರುವವರು ೨೩ ಜನ ಮಾತ್ರ.

ಶ್ರೀ ಕೆ. ರಾಮಂಭಟ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ''ವರ್ಗಾವಣೆಗೆ ಅರ್ಹತೆ ಇಲ್ಲದಿರುವುದು ಗ್ರೇಡ್ ೧ ನೌಕರರಿಗೆ ಸಂಬಂಧಿಸಿದಂತೆ'' ಎಂದು ಹೇಳಿದ್ದೀರಿ, ಅಂದರೆ ಇದಕ್ಕೆ ೧೯೭೮ ರ ಸಾರ್ವತ್ರಿಕ ಚುನಾವಣೆಯ ಪ್ರಯುಕ್ತ ಹೊರಡಿಸಿದ ಸರ್ಕಾರೀ ಆದೇಶ ಪ್ರಕಾರವೋ ಅಥವಾ ಕಾಲಕಾಲಕ್ಕೆ ಸರ್ಕಾರ ಹೊರಡಿಸಿದ ಮಿತವ್ಯಯದ ಆದೇಶದ ಕಾರಣವೋ ? ಇದು ಈಗಲೂ ಜಾರಿಯಲ್ಲಿದೆಯೇ

SRI A. K. ABDUL SAMAD,—The post of Senior Statistical Assistant is a lent service from the Bureau of Economics and Statistics. ನಾವು ಅವರನ್ನು ಟ್ರಾನ್ಸ್‌ಫರ್ ಮಾಡಲು ಆಗುವುದಿಲ್ಲ. ಇದರಲ್ಲಿ ೧ನೇ ದರ್ಜೆ ಗುಮಾಸ್ತರಿದ್ದಾರೆ. ೪ನೇ ದರ್ಜೆ ನೌಕರರಿದ್ದಾರೆ, ಲ್ಯಾಬೋರೇಟರಿ ಟೆಕ್ನಿಷಿಯನ್ಸ್ ಇದ್ದಾರೆ. ಆದರೆ ಡಿಸ್ಟ್ರಿಕ್ಟ್ ಸೂಪರಿಂಡೆಂಟೆಂಟ್ ಪೋಸ್ಟ್ ಇರುವುದು ಕೇವಲ ಒಂದು ಹುದ್ದೆ ಮಾತ್ರ, ಅದಕ್ಕೆ ಸಮನಾದ ಹುದ್ದೆ ಬೇರೆ ಎಲ್ಲೂ ಇಲ್ಲದಿರುವುದರಿಂದ ಅವರನ್ನು ನಾವು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಉಳಿದವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಏನೂ ತೊಂದರೆಯಿಲ್ಲ. ಯಾವುದಾದರೂ ನಿರ್ದಿಷ್ಟ ಪ್ರಕರಣವಿದ್ದರೆ ಅದನ್ನು ಮಾನ್ಯ ಸದಸ್ಯರು ತಿಳಿಸಿದರೆ, ಪರಿಶೀಲಿಸುತ್ತೇನೆ.

ಶ್ರೀ ಕೆ. ರಾಮಂಭಟ್.—ತಮ್ಮ ಗಮನಕ್ಕೆ ಬರೆದೂ ಕೂಡ ಕೊಟ್ಟಿದ್ದೇನೆ. ಅವರು ಅಲ್ಲಿ ಕುಳಿತು ಬಹಳ ವರ್ಷದಿಂದಲೂ ಟ್ರಾನ್ಸ್‌ಫರ್ ಇಲ್ಲದೆ ಬಹಳ ತೊಂದರೆ ಮಾಡುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬರೆದೂ ಕೂಡ ಕೊಟ್ಟಿದ್ದೇನೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಅದರ ಉದ್ದೇಶ ಗೊತ್ತು ವೆಸ್ಟೆಡ್ ಇಂಟರೆಸ್ಟ್ ಚಟುವಟಿಕೆ ನಡೆಸುತ್ತಿದ್ದಾರೆ. ಅದನ್ನು ಕುರಿತು

ಪ್ರಶ್ನೆ ಕೇಳುತ್ತಿದ್ದೇನೆ ಅದರ ಬಗ್ಗೆ ವಿಮರ್ಶೆ ಮಾಡುತ್ತೀರಾ ? ಎಷ್ಟು ಸಮಯದಿಂದ ಅಲ್ಲಿ ಇದ್ದಾರೆ.

SRI A. K. ABDUL SAMAD.—Those who are eligible for transfers and still they are staying beyond the normal period of four years ಅಂಥವರಿಗೆ ಟ್ರಾನ್ಸ್‌ಫರ್ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಅಂಥವರು ಇದ್ದರೂ ಹೈಪೊತೆಟಿಕಲ್ ಆಗಿ ಮಾತನಾಡಬಾರದು. ತಾವು ತರಿಸಿನೋಡಿ. ಡಿಪಾರ್ಟ್‌ಮೆಂಟ್‌ನಿಂದ ಇನ್‌ಫರ್‌ಮೇಷನ್ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಕೆ. ಅಬ್ದುಲ್ ಸಮ್ಮದ್.—ಅದನ್ನು ಪರಿಶೀಲನೆ ಮಾಡುತ್ತೇನೆ. I will have it examined.

ಚುಕ್ಕೆ ಪ್ರಶ್ನೆ ಸಂಖ್ಯೆ (೧೨೯೦)

ಅಧ್ಯಕ್ಷರು.—ಮಾನ್ಯ ಚಂದ್ರಶೇಖರ್‌ರವರೇ ಈ ಪ್ರಶ್ನೆಯನ್ನು ಆನಂತರ ತೆಗೆದುಕೊಳ್ಳೋಣ. ಮಾನ್ಯ ಸಚಿವರು ಬರುತ್ತಾರೆ. ಬಂದ ನಂತರ ಕರೆಯುತ್ತೇನೆ.

Taking over of Bangalore Palace by Government.

767 SRI T. B. JAYACHANDRA (Kallambella)—Will the Chief Minister be pleased to state :—

whether it is a fact that Bangalore Palace and its Property belonging to former Maharaja of Mysore is taken over by Government for public purpose ?

SRI R. GUNDU RAO (Chief Minister).—

No.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ ನನ್ನ ಆ ಪ್ರಶ್ನೆ ಸಾರ್ವಜನಿಕರ ಉದ್ದೇಶಕ್ಕಾಗಿ ಹಿಂದಿನ ಮೈಸೂರು ಮಹಾರಾಜರಿಗೆ ಸೇರಿದ ಅರಮನೆ ಹಾಗೂ ಅದರಲ್ಲಿನ ಆಸ್ತಿ ಪಾಸ್ತಿಗಳನ್ನು ಸರ್ಕಾರದವರು ಸೇರಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಕ್ಕೆ ವಹಿಸಿಕೊಂಡಿಲ್ಲವೆಂದು ಹೇಳಿದ್ದಾರೆ. ಅದು ಗೊತ್ತಿರುತ್ತದೆ, ವಹಿಸಿಕೊಳ್ಳುವುದಕ್ಕೆ ತೊಂದರೆಯಾದರೂ ಏನು ಸ್ವಾಮಿ ಎಂದು ಕೇಳುತ್ತೇನೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಹೀಗಿದೆ, ಸಾಧ್ಯವೇ ಎಂದು ಇಲ್ಲ. ನಿಮ್ಮ ಪ್ರಶ್ನೆ ಕಾಲಿಂಗ್ ಅಟೆನ್‌ಷನ್‌ಗೆ ಹಾಕಿ ಅವನ್ನು ಕನ್‌ವರ್ಟ್ ಮಾಡುವಾಗ ಈರೀತಿ ಆಗಿದೆ ಸ್ವಾಮಿ. ಸಪ್ಲಿಮೆಂಟರಿ ಏನು ಕೇಳುತ್ತೀರೋ ಕೇಳಿ ?

ಶ್ರೀ ಟಿ. ಬಿ. ಜಯಚಂದ್ರ.—ಅರಮನೆಗೆ ಸೇರಿದ ಆಸ್ತಿಪಾಸ್ತಿಗಳನ್ನು ಏತಕ್ಕೆ ತೆಗೆದುಕೊಂಡಿಲ್ಲ. ತೆಗೆದುಕೊಳ್ಳುವುದಕ್ಕೆ ತೊಂದರೆ ಏನು ನಿಮಗೆ ?

ಶ್ರೀ ಎಂ. ವೀರಪ್ಪಮೊಯಿಲಿ (ಹಣಕಾಸಿನ ಸಚಿವರುಮುಖ್ಯ ಮಂತ್ರಿಗಳ ಪರವಾಗಿ).— ಪ್ರಶ್ನೆ ಅವರಂ ಕೇಳಿರುವುದು ಕನ್ನಡದಲ್ಲಿ ಸರಿಯಾಗಿದೆ. ಆದರಲ್ಲಿಯೂ ಸರಿಯಾಗಿಯೇ ಇದೆ. ಆಸ್ತಿಪಾಸ್ತಿಗಳನ್ನು ಸರ್ಕಾರ ವಹಿಸಿಕೊಂಡಿರುವುದು ನಿಜವೇ ಎಂದು ಇದೆ. ವಹಿಸಿಕೊಂಡಿಲ್ಲ. ಅವರು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದು ಅದು ಕ್ವಶ್ಚನ್‌ರೀತಿ ಕನ್‌ವರ್ಟ್ ಆಗುವಾಗ ಈರೀತಿಯಾಗಿದೆ. ಉತ್ತರದಲ್ಲಿಯೂ ಕೂಡ ನಾವು ವಹಿಸಿಕೊಂಡಿಲ್ಲವೆಂದು ಉತ್ತರವನ್ನು ಕೊಟ್ಟಿದ್ದೇವೆ ಅಷ್ಟೆ

ಶ್ರೀ ಟಿ. ಬಿ. ಜಯಚಂದ್ರ —ಅರಮನೆ ಆಸ್ತಿಯನ್ನು ಏತಕ್ಕೆ ವಹಿಸಿಕೊಂಡಿಲ್ಲ. ವಹಿಸಿಕೊಳ್ಳುವುದಕ್ಕೆ ಏನು ತೊಂದರೆಇದೆ. ಏತಕ್ಕೆ ವಹಿಸಿಕೊಳ್ಳಬಾರದು ಎಂದು ಕೇಳುತ್ತೇನೆ.